**ಸಾಕ್ಷಿಗೆ ದಿನಾಂಕ 13-05-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ.ಶಿವುಕುಮಾರ್ ವಕೀಲರಿಂದಃ**

1. ನನಗೆ ಈಗ 62 ವರ್ಷ ವಯಸ್ಸಾಗಿರುತ್ತದೆ. ನಾನು ಈಗ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಶಿವರಪಟ್ನ ದಲ್ಲಿ ವಾಸವಾಗಿರುತ್ತೇನೆ. ನಾನು ಪಾತ್ರೆ ವ್ಯಾಪಾರ ಮಾಡುತ್ತೇನೆ. ಸದರಿ ವ್ಯಾಪಾರದಿಂದ ರೂ.40,000/- ಆದಾಯ ಬರುತ್ತಿತ್ತು. ಈಗ ನಾನು ವ್ಯಾಪಾರಕ್ಕೆ ಹೋಗುತ್ತಿಲ್ಲ. ಅಪಘಾತದ ದಿನ ನಾನು ಸವಾರಿ ಮಾಡುತ್ತಿದ್ದ ದ್ವಿಚಕ್ರ ವಾಹನ ನನ್ನ ಮಗ ಇಮ್ರಾನ್ ಗೆ ಸೇರಿರುತ್ತದೆ. ಅಪಘಾತದ ಸಮಯಕ್ಕೆ ನನಗೆ ದ್ವಿಚಕ್ರ ವಾಹನ ಸವಾರಿ ಮಾಡಲು ಡಿಎಲ್ ಇರಲಿಲ್ಲ ಮತ್ತು ಸದರಿ ದ್ವಿಚಕ್ರ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಡಿಎಲ್ ನ್ನು ಹಾಜರುಪಡಿಸಲು ತೊಂದರೆ ಇಲ್ಲ. ಅಪಘಾತ ಸಮಯದಲ್ಲಿ ಮಳೆ ಬರುತ್ತಿತ್ತು ಎಂದರೆ ಸರಿ. ಅಪಘಾತದ ದಿನ ಶಿವರಪಟ್ನದಿಂದ ಕೋಲಾರಕ್ಕೆ ಹೋಗುತ್ತಿದ್ದೇನೆ. ಅಪಘಾತ ನಡೆದ ರಸ್ತೆಯು ಒಂದು ಬಸ್ಸು ಸಂಚಾರ ಮಾಡವಷ್ಟು ಮಾತ್ರ ಅಂತರವಿರತ್ತದೆ. ಅಪಘಾತದ ಸ್ಥಳಕ್ಕೂ ಮತ್ತು ರಸ್ತೆ ಕೊನೆಯ ಅಂಚಿಗೂ ಸ್ವಲ್ಪ ಅಂತರವಿರುತ್ತದೆ.

2. ಒಂದನೇ ಎದುರುದಾರರ ವಾಹನವನ್ನು ನಾನು 8-10 ಅಡಿ ಅಂತರದಿಂದ ನೋಡಿರುತ್ತೇನೆ. ಎರಡು ವಾಹನಗಳು ಮುಖಾಮುಖಿ ಡಿಕ್ಕಿಯಾಗಿವೆ ಎಂದರೆ ಸರಿ. ಎರಡು ವಾಹನಗಳ ಮುಂಭಾಗಗಳು ಜಖಂಗೊಂಡಿವೆ ಎಂದರೆ ಸರಿ. ನನಗೆ ದ್ವಿಚಕ್ರ ವಾಹನ ಸವಾರಿ ಮಾಡಲು ಬರುತ್ತಿರಲಿಲ್ಲ ಮತ್ತು ಅಪಘಾತದ ಸಮಯದಲ್ಲಿ ಮಳೆ ಬರುತ್ತಿದ್ದ ಕಾರಣ ರಸ್ತೆ ಸರಿಯಾಗಿ ಕಾಣದೇ ನಾನೇ ಹೋಗಿ ಒಂದನೇ ಎದುರುದಾರರ ವಾಹನಕ್ಕೆ ಡಿಕ್ಕಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಮಗಳಿಗೂ ಗಾಯಗಳು ಆಗಿವೆ. ಅಪಘಾತದ ಸಮಯದಲ್ಲಿ ನಾನು ಮತ್ತು ನನ್ನ ಮಗಳು ಹೆಲ್ಮೆಟ್ ಹಾಕಿದ ಬಗ್ಗೆ ನನ್ನ ಹೇಳಿಕೆಯಲ್ಲಿ ನಮೂದು ಇಲ್ಲ ಎಂದರೆ ಸರಿ. ಸಾಕ್ಷಿ

ಮುಂದುವರೆದು ನಾನು ಮತ್ತು ನನ್ನ ಮಗಳು ಹೆಲ್ಮೆಟ್ ಧರಿಸಿದ್ದೇವು ಎಂದು ನುಡಿಯುತ್ತಾರೆ. ನನ್ನ ನಿರ್ಲಕ್ಷ್ಯತನದಿಂದ ಈ ಅಪಘಾತವಾಗಿದೆ ಎಂದರೆ ಸರಿಯಲ್ಲ.

3. ಅಪಘಾತದ ನಂತರ ಕೋಲಾರದ ನರೇಂದ್ರ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ಎಡಗಾಲಿಗೆ ಶಸ್ತ್ರಚಿಕಿತ್ಸೆ ಮಾಡಿರುತ್ತಾರೆ. ದೂರನ್ನು ನಾನೇ ನೀಡಿರುತ್ತೇನೆ. ನಿಪಿ.9 ವೈದ್ಯಕೀಯ ಬಿಲ್ಲುಗಳು ಸೃಷ್ಟಿತ ಬಿಲ್ಲುಗಳು ಎಂದರೆ ಸರಿಯಲ್ಲ. ನಿಪಿ.9 ಕ್ಕೆ ಸಂಬಂಧಿಸಿದಂತೆ ಪೂರಕವಾಗಿ ಯಾವುದೇ ಔಷಧಿ ಚೀಟಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ಅಪಘಾತದಿಂದಾದ ಗಾಯಗಳು ಈಗ ವಾಸಿಯಾಗಿವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ನೋವು ಇರುತ್ತದೆ ಎಂದು ನುಡಿಯುತ್ತಾರೆ.

4. ನನ್ನ ವೈದ್ಯಕೀಯಕ್ಕೆ ರೂ.2,00,000/- ಖರ್ಚಾಗಿಲ್ಲ ಎಂದರೆ ಸರಿಯಲ್ಲ. ನನಗೆ ಅಳವಡಿಸಿರುವ ಒಳಜೋಡಣೆಗಳು ಇನ್ನೂ ಹಾಗೆಯೇ ಇರುತ್ತವೆ. ಈಗಲೂ ನಾನು ವ್ಯಾಪಾರ ಮಾಡಿ ವರಮಾನ ಗಳಿಸುತ್ತಿದ್ದರು ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯ ಎಂ ಎಲ್ ಸಿ ದಾಖಲೆಯನ್ನು ಹಾಜರುಪಡಿಸಬಲ್ಲೇನು. ನಾನು ಪೊಲೀಸರೊಂದಿಗೆ ಶಾಮೀಲಾಗಿ ಒಂದನೇ ಎದುರುದಾರರ ವಾಹನದ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಒಂದನೇ ಎದುರುದಾರರು ಮತ್ತು ಮತ್ತು ಅವರ ಪರ ವಕೀಲರು ಗೈರು ಹಾಜರು. ಈ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**